ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಬಾಗೇಪಲ್ಲಿ

C.C. 230/2017 CW: 1 P.W. 1

| | |
|---|---|
| ಸಾಕ್ಷಿದಾರರ ಹೆಸರು | ಃ ನಗೀನಾ |
| ತಂದೆ/ಗಂಡನ ಹೆಸರು | ಃ ಉಸ್ತಾರ್ ಅಹಮದ್ |
| ವಯಸ್ಸು | ಃ 34 ವರ್ಷ |
| ವೃತ್ತಿ | ಃ ಟೀಚರ್ |
| ವಾಸಸ್ಥಳ | ಃ ಬಾಗೇಪಲ್ಲಿ |

**ಪ್ರಮಾಣೀಕರಿಸಲಾದ ದಿಃ 12.09.2023**

**ಮುಖ್ಯ ವಿಚಾರಣೆ ಃಃ ಸಸಅ ರವರಿಂದಃ**

ದಿಃ 16.06.2013 ರಂದು 1 ನೇ ಆರೋಪಿ ಮೊಹಮದ್ ಪಾಷಾ ರವರ ಜೊತೆಗೆ ಬಾಗೇಪಲ್ಲಿಯ ಜಾಮೀಯಾ ಮಸೀದಿಯಲ್ಲಿ ಮದುವೆ ನಡೆದಿರುತ್ತದೆ. ಮದುವೆ ಸಮಯದಲ್ಲಿ 1 ನೇ ಆರೋಪಿಗೆ 10 ಲಕ್ಷ ನಗದು, 4 ಕೈ ಉಂಗುರಗಳನ್ನು, 2 ಕತ್ತು ಚೈನ್‌ಗಳನ್ನು, 1 ಬ್ರಾಸ್ ಲೇಟ್, ಒಂದು ಇಂಡಿಕಾ ಕಾರು ನಂ. ಕೆಎ 05 ಎಮ್ 442 ಅನ್ನು ಕೊಟ್ಟಿರುತ್ತೇವೆ.

2. ನನ್ನ ಅತ್ತೆ 2 ನೇ ಆರೋಪಿಗೆ 50 ಗ್ರಾಂ ಚಿನ್ನದ ಸರವನ್ನು ನೀಡಿರುತ್ತೇವೆ. ಮನೆ ನಿರ್ಮಾಣದ ಸಲುವಾಗಿ 1 ನೇ ಆರೋಪಿಗೆ 1, 50,000/- ರೂ. ಕೊಟ್ಟಿರುತ್ತೇವೆ. ಗೃಹ ಬಳಕೆಯ ವಸ್ತುಗಳ ಖರೀದಿಗೆ 15 ಲಕ್ಷ ರೂ. ಗಳನ್ನು ನೀಡಿದ್ದೇವೆ. ನಮ್ಮ ತಂದೆ ತಾಯಿಯವರು ನನಗೆ 2 ದೊಡ್ಡ ಬಂಗಾರದ ಹಾರಗಳು, ಒಂದು ನೆಕ್ ಲೇಸ್ ಮತ್ತು ಅಮೇರಿಕನ್ ಡೈಮಂಡ್ ನೇಕ್ಲೇಸ್ ಮತ್ತು 4 ಬಂಗಾರದ ಬಳೆಗಳು ಮತ್ತು 10 ಬಂಗಾರದ ಉಂಗುರಗಳನ್ನು, 11 ಜೊತೆ ಬಂಗಾರದ ಒಲೆಗಳು, 4 ಲಕ್ಷ ರೂ. ಬೆಲೆ ಬಾಳುವ ಸೀರೆಗಳನ್ನು ಕೊಡಿಸಿರುತ್ತಾರೆ.

3. ಮದುವೆ ನಂತರ ನನ್ನ ಗಂಡನ ಮನೆಗೆ ಬಂದಿರುತ್ತೇನೆ. ಅಲ್ಲಿ 3 ವರ್ಷಗಳ ಕಾಲ

ಇದ್ದೆ. 6 ತಿಂಗಳು ಮಾತ್ರ ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. 6 ತಿಂಗಳ ನಂತರ ನನ್ನ ಅತ್ತೆ, ನಾದಿನಿಯರಾದ ಆಯೇಷಾ, ರೇಷ್ಮಾ, ತಬ್ ಸುಮ್, ನನ್ನ ಮಾವಾ ವಾಜೀದ. ಹಾಗೂ ನನ್ನ ಗಂಡನ ಮಾವಾ ಬಾಬು ರವರು ವರದಕ್ಷಿಣೆ ತೆಗೆದುಕೊಂಡು ಬರುವಂತೆ ಕಿರುಕುಳ ಕೊಡುತ್ತಿದ್ದರು.

4. ಹಣವನ್ನು ತಂದಿಲ್ಲ ಎಂದರೆ ಸೀಮೆಎಣ್ಣೆ ಹಾಕಿ ಸುಟ್ಟು ಹಾಕುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದರು. ನಾನು ಹಣ ತರದೇ ಹೋದರೆ ನನ್ನ ಗಂಡನಿಗೆ ಬೇರೆ ಮದುವೆ ಮಾಡುತ್ತೇವೆ ಎಂದು ಬೆದರಿಸುತ್ತಿದ್ದರು. ನನ್ನ ಗಂಡ ಮನೆಯಲ್ಲಿ ಇಲ್ಲದೇ ಇದ್ದಾಗ ನಾದಿನಿಯರು ಮತ್ತು ನನ್ನ ಅತ್ತೆ ನನಗೆ ಜಾಸ್ತಿ ಕಿರುಕುಳ ಕೊಡುತ್ತಿದ್ದರು. ಈ ವಿಷಯವನ್ನು ನಾನು 1 ನೇ ಆರೋಪಿಗೆ ತಿಳಿಸಿದರೆ, ನೀನು ಕಪ್ಪಗಿದ್ದೀಯಾ, ನಾನು ಬೆಳ್ಳಗಿರುವವರನ್ನು ಮದುವೆ ಮಾಡಿಕೊಳ್ಳುತ್ತೇನೆ ಎಂದು ಹೇಳುತ್ತಿದ್ದರು.

5. 5 ಎಕರೆ ಜಮೀನು , 2 ಲಕ್ಷ ಹಣ, ಒಂದು ಬುಲೆಟ್ ಬೈಕ್ ಅನ್ನು ತೆಗೆದುಕೊಂಡು ಬರದೇ ಇದ್ದರೆ ನೀನು ಸಾಯಿಸುತ್ತೇನೆ ಎಂದು ಬೆದರಿಕೆ ಹಾಕುತ್ತಿದ್ದರು. ನನ್ನ ತಂದೆ ತಾಯಿಗೆ ಒಟ್ಟು 3 ಜನ ಮಕ್ಕಳು . ನಾನು ಮತ್ತು ಇಬ್ಬರು ಅಣ್ಣಂದಿರು. ಇಬ್ಬರು ಅಣ್ಣಂದಿರು ಅಪಘಾತವಾಗಿ ತೀರಿಹೋಗಿರುತ್ತಾರೆ. ಅಪಘಾತದಿಂದ ಬಂದ ವಿಮಾ ಹಣದಿಂದ ಸುಮಾರ 40 ಲಕ್ಷ ರೂ. ಖರ್ಚು ಮಾಡಿ ನನ್ನ ತಂದೆ ಮದುವೆ ಮಾಡಿರುತ್ತಾರೆ. ಜಾಸ್ತಿ ಕಿರುಕುಳ ಕೊಡಲು ಪ್ರಾರಂಭಿಸಿದಾಗ ಈ ವಿಷಯವನ್ನು ನಾನು ನನ್ನ ತಂದೆಗೆ ತಿಳಿಸಿರುತ್ತೇನೆ. ಸ್ವಲ್ಪ ಅನುಸರಿಸಿಕೊಂಡು ಹೋಗು ಎಂದು ಹೇಳಿರುತ್ತಾರೆ.

6. ನಾನು ಗರ್ಭಿಣಿಯಾಗಿದ್ದಾಗ ಬಲವಂತವಾಗಿ ನನ್ನನ್ನು ತವರು ಮನೆಗೆ ಕಳುಹಿಸಿರುತ್ತಾರೆ. ದಿಃ 14.02.2015 ರಲ್ಲಿ ನಾನು ಎರಡನೇ ಮಗುವಿಗೆ ಜನ್ಮ ನೀಡಿದಾಗ ನನ್ನ ಗಂಡ ಮತ್ತು ಅವರ ಜೊತೆ 10 ಜನ ಬಂದಿರುತ್ತಾರೆ. ಆರೋಪಿಗೆ ಹಣವನ್ನು ಜಮೀನನ್ನು ಮತ್ತು ಬೈಕ್ ನ್ನು ಕೊಡಿಸುತ್ತೇವೆ ಎಂದು ಹೇಳಿದ್ದೀರಿ ಯಾವಾಗ ಕೊಡಿಸುತ್ತೀರಿ

ಎಂದು ಕೇಳಿದರು. ಆಗ ಅಕ್ಕ ಪಕ್ಕದ ಮನೆಯವರು ಬಂದು ನನ್ನ ಗಂಡ ಮತ್ತು ಅವರ ಜೊತೆಗೆ ಬಂದವರನ್ನು ಸಮಾಧಾನ ಮಾಡಿರುತ್ತಾರೆ.

7. ದಿಃ 19.02.2015 ರಂದು ನನ್ನ ಗಂಡ ನನ್ನ ಮನೆಗೆ ಬಂದು ಜಗಳ ಮಾಡಿ, ಹೊರಟು ಹೋಗಿರುತ್ತಾರೆ. ನೀವು ಹಣ, ಜಮೀನು ಕೊಡುವವರೆಗೂ ನಿನ್ನನ್ನು ಮನೆಗೆ ಕರೆದುಕೊಂಡು ಹೋಗುವುದಿಲ್ಲ ಎಂದು ಹೇಳಿರುತ್ತಾರೆ. ದಿಃ 11.03.2015 ರಂದು ನನಗೆ ಗಂಡು ಮಗು ವಾಗಿರುತ್ತದೆ. ಮಗುವನ್ನು ನೋಡಲು ಆರೋಪಿ ಬಂದಿರುವುದಿಲ್ಲ. ನಂತರ ದಿಃ 08.08.2015 ರಂದು 1 ನೇ ಆರೋಪಿ ಮತ್ತು ಅವರ ಜೊತೆಗೆ ಸುಮಾರು 10 ರಿಂದ 15 ಜನಗಳನ್ನು ಕರೆದುಕೊಂಡು ಬಂದು ನಾವು ಕೇಳಿದ ಹಣ ಮತ್ತು ಜಮೀನಿನನ್ನು ಕೊಟ್ಟರೆ ನಿಮ್ಮ ಮಗಳನ್ನು ಕರೆದುಕೊಂಡು ಹೋಗುತ್ತೇನೆ ಎಂದು ತಿಳಿಸಿರುತ್ತಾರೆ. ಆಗ ಅಕ್ಕ ಪಕ್ಕದ ಮನೆಯವರು ಬಂದು ಸುಮಾಧಾನ ಮಾಡಿರುತ್ತಾರೆ.

8. ನಂತರ ದಿಃ 10.08.2015 ರಂದು ನನ್ನನ್ನು ನನ್ನ ಮಗುವನ್ನು ಚಿದತಾಮಣಿಗೆ ಕರೆದುಕೊಂಡು ಹೋಗಿರುತ್ತಾರೆ. ಚಿಂತಾಮಣಿ ಯಲ್ಲೂ ಕುಡಾ ನನಗೆ ವಿರುಕುಳ ನೀಡಿರುತ್ತಾರೆ. ಮಗುವನ್ನು ಕೂಡಾ ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ. ದಿಃ 15.09.2015 ರಂದು ತುಮಕೂರಿನಲ್ಲಿ ನನ್ನ ದೊಡ್ಡಪ್ಪ ಮೃತ ಪಟ್ಟಿರುತ್ತಾರೆ. ನನ್ನ ಗಂಡ ತುಮಕೂರಿಗೆ ಬರದೇ ಇದ್ದುದರಿಂದ ನನ್ನ ತಂದೆ ತಾಯಿಗೆ ಜೊತೆಗೆ ನಾನು ತುಮಕೂರಿಗೆ ಹೋಗಿ ಬಂದಿರುತ್ತೇನೆ. ದಿಃ 17.09.2015 ರಂದು ಮತ್ತೆ ಚಿಂತಾಮಣಿ ಗೆ ವಾಪಸ್ಸು ಬಂದಿರುತ್ತೇನೆ.

9. ಆಗ ನನ್ನ ನಾದಿನಿ ಗೋಹಾ ತಬುಸುಮ್, ನನ್ನ ಅತ್ತೆ ತಾಜ್ ಉನ್ನಿಸಾ ಮನೆಯಲ್ಲಿ ಒಳಗೆ ಸೇರಿಸಲಿಲ್ಲ, ನನ್ನನ್ನು ಹೊಡೆದು ಮನೆ ಹೊರಗೆ ನಿಲ್ಲಿಸಿರುತ್ತಾರೆ. ನನ್ನ ಜೊತೆಗೆ ನನ್ನ ತಂದೆ ತಾಯಿಯರು ಇದ್ದರು. ಆಗ ನನ್ನ ತಂದೆ ತಾಯಂದಿರು ಇದ್ದ ಸಂಬಂಧಿಕರನ್ನು ಕರೆದರು. ನನ್ನ ಸಂಬಂಧಿಕರು ತಾಜ್ ಉನ್ನಿಸಾ ಹಾಗೂ ಗೋಹಾ ತಬುಸುಮ್ ಅನ್ನು

ಪ್ರಶ್ನಿಸಿದರು. ಅದಕ್ಕೆ ಅವರು ಜಮೀನು ಕೊಡಿಸುತ್ತೇವೆ ಎಂದು ನಮಗೆ ಜಮೀನು ಕೊಡಿಸಿಲ್ಲ ಅದನ್ನು ಕೊಡಿಸಿದರೆ ಮನೆಗೆ ಸೇರಿಸುತ್ತೇವೆ ಎಂದು ಹೇಳಿದರು.

10. ಬೇರೆ ದಾರಿ ಇಲ್ಲದೆ ನಾನು ನನ್ನ ತಂದೆ ತಾಯಿ ಜೊತೆಗೆ ನಾನು ಕಾರಿನಲ್ಲಿ ಕುಳಿತುಕೊಂಡಾಗ ನನ್ನ ತಾಯಿ ಬಳಿ ಇದ್ದ, ಹ್ಯಾಂಡ್ ಬ್ಯಾಗ್ ನಲ್ಲಿ ಸ್ವಲ್ಪ ಹಣ,ಬಂಗಾರದ ಒಡವೆ, ಎರಡು ಮೊಬೈಲ್ ಇದ್ದವು. ಅದನ್ನು ನನ್ನ ಗಂಡನ ಮಾವಂದಿರಾದ ಆರೀಫ್ ಮತ್ತು ಬಾಬು ರವರು ಕಿತ್ತುಕೊಂಡು ನನ್ನ ಗಂಡನ ಕೈಗೆ ಕೊಟ್ಟರು, ಆ ಬ್ಯಾಗ್ ಅನ್ನು ತೆಗೆದುಕೊಂಡು ನನ್ನ ಗಂಡ ಓಡಿಹೋಗಿರುತ್ತಾರೆ.

11. ನಂತರ ನಾವು ಬಾಗೇಪಲ್ಲಿಗೆ ವಾಪಸ್ಸು ಬಂದೆವು. 1 ನೇ ಆರೋಪಿ ನಮ್ಮ ವಿರುದ್ಧ ಚಿಂತಾಮಣಿ ಮಹಿಳಾ ಸಾಂತ್ವನ ಕೇಂದ್ರದಲ್ಲಿ ದೂರು ನೀಡಿರುತ್ತಾರೆ. 1 ನೇ ಆರೋಪಿಯ ತಂದೆ ತಾಯಿಗಳು ಮತು ನನ್ನ ತಂದೆ ತಾಯಿಗಳನ್ನು ಸಾಂತ್ವನ ಕೇಂದ್ರಕ್ಕೆ ಕರೆಸಿ ಮಚ್ಚಳಿಕೆ ಪತ್ರವನ್ನು ಬರೆದುಕೊಟ್ಟು ಒಂದು ಪ್ರತ್ಯೇಕ ಮನೆಯನ್ನು ಮಾಡುವಂತೆ ಸೂಚಿಸಿರುತ್ತಾರೆ ನಂತರ ದಿಃ 09.01.2016 ರಂದು ಚಿಂತಾಮಣಿಯ ಒಂದು ಸೆಡ್ ರೀತಿ ಇರುವ ಮನೆಗೆ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ.

12. ಒಂದು ಸೀಮೆಎಣ್ಣೆ ಸ್ಟೋ ಮತ್ತು ಕುಕ್ಕರ್ ತಂದು ಕೊಟ್ಟಿರುತ್ತಾರೆ. ಸೀಮೆಎಣ್ಣೆ ಸ್ಟೋ ಸೋರುತ್ತಿತ್ತು. ಸದರಿ ಮನೆಯಲ್ಲಿ ಮೂಲ ಸೌಕರ್ಯಗಳು ಇರಲಿಲ್ಲ. ಸುಮಾರು 17 ದಿನಗಳ ಕಾಲ ಅಲ್ಲಿ ವಾಸವಾಗಿದ್ದೆವು. ದಿಃ 26.01.2016 ರಂದು ಬೈಕ್ ನಲ್ಲಿ ಮನೆಯ ಸಾಮಾನುಗಳನ್ನು ತರಲು ನನ್ನ ಕರೆದುಕೊಂಡು ಹೊರಗೆ ಹೋಗಿರುತ್ತಾರೆ. ಚಿಂತಾಮಣಿ ಎಮ್ ಜಿ ರಸ್ತೆಯಲ್ಲಿ ಬೈಕ್ ನಿಲ್ಲಿಸಿ ನನ್ನನ್ನು ನನ್ನ ಮಗುವನ್ನು ತಳ್ಳಿ ನಾನು ಹೇಳಿದ ವಸ್ತುಗಳನ್ನು ತರುವವರೆಗೆ ಬರಬೇಡ ಎಂದು ಹೊರಟು ಹೋಗಿರುತ್ತಾರೆ. ನಂತರ ನಗೆ ಏನು ತೋಚದೆ ನಾನು ಬಾಗೇಪಲ್ಲಿಯ ನನ್ನ ತಂದೆ ತಾಯಿಯ ಮನೆಗೆ ವಾಪಸ್ಸು ಬಂದಿರುತ್ತೇನೆ.

13. ಬಾಗೇಪಲ್ಲಿಗೆ ಬಂದ ನಂತರ ಜಾಮೀಯಾ ಮಸೀದಿಗೆ ನಾವು ಅರ್ಜಿ ನೀಡಿರುತ್ತೇವೆ. ಮತ್ತು ಮಹಿಳಾ ಸಾಂತ್ವನ ಕೇಂದ್ರಕ್ಕೂ ಅರ್ಜಿ ನೀಡಿರುತ್ತೇವೆ. ಅದಕ್ಕೆ ಅವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ನನ್ನ ಅತ್ತೆ ಮತ್ತು ಮಾವ ದೂರು ಕೊಟ್ಟರೆ, ನಿಮ್ಮನ್ನೆಲ್ಲಾ ಸಾಯಿಸುತ್ತೇವೆ ಎಂದು ಕರೆ ಮಾಡಿ ಬೆದರಿಕೆ ಹಾಕಿರುತ್ತಾರೆ. ನಾವು ಸ್ವಲ್ಪ ದಿನ ಕಾಯ್ದು ದೂರನ್ನು ನೀಡಿರುತ್ತೇವೆ. ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ದೂರು ನೀಡಿದ ನಂತರ ಪೋಲೀಸರು ದಿಃ 13.12.2016 ರಂದು ಮನೆ ಬಳಿ ಬಂದು ನನ್ನ ತಂದೆ ತಾಯಿ ಸಮಕ್ಷಮ ಪಂಚನಾಮೆ ತಯಾರಿಸಿ ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದುಗ ಗುರುತಿಸಲಾಯಿತು. ಪಂಚನಾಮೆಗೆ ನನ್ನ ಜೊತೆಗೆ ನಾಗರಾಜು ಸಹಿ ಮಾಡಿರುತ್ತಾರೆ.

14. ನಂತರ ನಾನು ಠಾಣೆಗೆ ಬೇಟಿ ನೀಡಿ ನನ್ನ ಮದುವೆಯ ಆಮಂತ್ರಣ ಪತ್ರಿಕೆ ಪೋಟೊಗಳನ್ನು ಮಸೀದಿಯಿಂದ ನೀಡಿದ ಎನ್ ಒ ಸಿ ರಶೀದಿ ಮತ್ತು ಇತರೆ ದಾಖಲೆಗಳನ್ನು ಪೋಲೀಸರಿಗೆ ನೀಡಿರುತ್ತೇನೆ. ಅಮಾನತ್ತು ಪಂಚನಾವೆಯನ್ನು ತಯಾರಿಸಿರುತ್ತಾರೆ. ಪಂಚನಾಮೆಯನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ನಿಪಿ 3 ಕ್ಕೆ ಚಾಸಾ 2 ಸಹಿ ಮಾಡಿರುತ್ತಾರೆ. ಆಮಂತ್ರಣ ಪತ್ರಿಕೆಯನ್ನು ನಿಪಿ 4 ಎಂದು, ಮ್ಯಾರೇಜ್ ಸರ್ಟಿಫಿಕೇಟ್ ಅನ್ನು ನಿಪಿ 5 ಎಂದು, ಎನ್ ಒ ಸಿ ರಶೀದಿಯನ್ನು ನಿಪಿ 6 ಎಂದು ಗುರುತಿಸಲಾಯಿತು.

(**ಈ ಹಂತದಲ್ಲಿ ಮುಂ. ಮುಖ್ಯ ವಿಚಾರಣೆಗೆ ಸಮಯಾವಕಾಶ ನೀಡಲಾಯಿತು.**)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಜೆಎಂಎಫ್‌ಸಿ., ಬಾಗೇಪಲ್ಲಿ